**ಎಲ್ಲ ಕ್ಷೇತ್ರಗಳಲ್ಲಿ ಇರುವಂತೆ ಲಿಂಗ ತಾರತಮ್ಯ ಸಮಸ್ಯೆ ಕ್ರೀಡಾಕ್ಷೇತ್ರದಲ್ಲಿಯೂ ಇದೆ. ಸಮಾನ ಅವಕಾಶ, ಸಮಾನ ವೇತನ, ಗೌರವಧನ ಇವುಗಳಲ್ಲಿಯೂ ತರತಮ ಎದ್ದು ಕಾಣುತ್ತದೆ. ಮಹಿಳೆಯರಿಗೆ ಎದುರಾಗುವ ಲೈಂಗಿಕ ಕಿರುಕುಳದ ಜೊತೆಗೆ ಸಾಮಾಜಿಕ ಒತ್ತಡಗಳೂ ಮಹಿಳೆಯರು ಕ್ರೀಡಾಕ್ಷೇತ್ರದಿಂದ ದೂರ ಉಳಿಯುವಂತೆ ಮಾಡುತ್ತಿವೆ. ಎಲ್ಲ ಅಡೆತಡೆಗಳನ್ನು ಮೀರಿಯೂ ಭಾರತದ ಹೆಸರನ್ನು, ಪದಕಗಳ ಪಟ್ಟಿಯಲ್ಲಿ ಕಾಣುವಂತೆ ಮಾಡಿರುವ ವನಿತೆಯರು ನಮ್ಮ ನಡುವೆಯೇ ಇದ್ದಾರೆ. ಇನ್ನಷ್ಟು ಕ್ರೀಡಾ ಪ್ರತಿಭೆಗಳಿಗೆ ಅವಕಾಶಗಳು ದೊರೆಯಲು ಅವರ ಈ ಯಾನ ಸ್ಫೂರ್ತಿದಾಯಕವಾಗಲಿ ಎಂದು ಸುಧಾ ಲೇಖನ ಪ್ರತಿಪಾದಿಸುತ್ತಿದೆ.**

**■ ಗಿರೀಶ ದೊಡ್ಡಮನಿ**

ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಚಳಗೇರಿ ಗ್ರಾಮದಲ್ಲಿ ದನಗರ ಗೌಳಿ ಎಂಬ ಸಮುದಾಯವಿದೆ. ಹಲವಾರು ವರ್ಷಗಳ ಹಿಂದೆ ಮಹಾರಾಷ್ಟ್ರದಿಂದ ಯಾವುದೋ ಸಂದರ್ಭದಲ್ಲಿ ಇಲ್ಲಿಗೆ ಬಂದು ನೆಲೆ ಕಂಡುಕೊಂಡಿದ್ದಾರೆ. ಆದರೆ, ಬಡತನದಿಂದಾಗಿ ಶಿಕ್ಷಣ ಮತ್ತು ಕ್ರೀಡಾ ಚಟುವಟಿಕೆಗಳಿಂದ ದೂರ ಉಳಿದಿದ್ದೇ ಹೆಚ್ಚು. ಹೊರಜಗತ್ತಿಗೂ ಈ ಜನರ ಕುರಿತ ಇದ್ದ ಮಾಹಿತಿಯೂ ಅಷ್ಟಕ್ಕಷ್ಟೇ. ಹೆಣ್ಣುಮಕ್ಕಳಿಗೆ ಇನ್ನೂ ಕಟ್ಟಳೆಗಳು ಹೆಚ್ಚು. ಆದರೆ ಎರಡು ವರ್ಷಗಳ ಹಿಂದೆ ಇದೇ ಜನಾಂಗದ ಹುಡುಗಿ ನಯನಾ ಕೋಕರೆ ದಕ್ಷಿಣ ಕೊರಿಯಾದಲ್ಲಿ ನಡೆದಿದ್ದ ಏಷ್ಯನ್ ಅಥ್ಲೆಟಿಕ್ ಕೂಟದ 4X100 ಮೀಟರ್ ರಿಲೆಯಲ್ಲಿ ಕಂಚಿನ ಪದಕ ಜಯಿಸಿದರು. ರಿಲೆ ತಂಡದ ಗೆಲುವಿನಲ್ಲಿ ಅವರ ಓಟವು ಪ್ರಮುಖವಾಗಿತ್ತು. ಕೆಲವು ವರ್ಷಗಳ ಹಿಂದೆ ಮುಂಡಗೋಡದಲ್ಲಿ ಆರಂಭವಾಗಿದ್ದ 'ಬ್ರಿಜಸ್ ಆಫ್ ಸ್ಪೋರ್ಟ್ಸ್ ಫೌಂಡೇಷನ್' ತರಬೇತಿ ನೀಡಿದ್ದರಿಂದ ನಯನಾಗೆ ಈ ಮಟ್ಟಕ್ಕೇರಲು ಸಾಧ್ಯವಾಯಿತು. ಅವರ ಸಾಧನೆಯಿಂದಾಗಿ ದನಗರ ಗೌಳಿ ಸಮುದಾಯದಲ್ಲಿ ಬದಲಾವಣೆಯ ಗಾಳಿ ಬೀಸಿದೆ. ತಮ್ಮ ಹೆಣ್ಣುಮಕ್ಕಳನ್ನು ಕ್ರೀಡೆಗಳಿಗೆ ಕಳಿಸಲು ಪಾಲಕರು ಮುಂದಾಗುತ್ತಿದ್ದಾರೆ. ಈ ಜನಾಂಗದಲ್ಲಿ ಕಾಲೇಜು ಮೆಟ್ಟಿಲು ಹತ್ತಿದ ಮೊದಲ ಹುಡುಗಿ ನಯನಾ ಅವರಾಗಿದ್ದಾರೆ.






ರಾಣಿ ರಾಂಪಾಲ್
ಹಾಕಿ



ಮೇರಿ ಕೋಮ್
ಬಾಕ್ಸಿಂಗ್




ಸಾಕ್ಷಿ ಮಲಿಕ್
ಕುಸ್ತಿ